ಆದ ವಿಧಾನಗಳಿವೆ. ಎಲ್ಲ ಸಮುದಾಯಗಳಿಗೂ ಅಗತ್ಯವಾದ ಭೌತಿಕವಾದ ಜೀವನಸಾಧನಗಳ ಗುಣಮಟ್ಟವನ್ನು ಉತ್ತಮಗೊಳಿಸುವುದರಿಂದ ಸಕಲರಿಗೂ ಒಳಿತಾಗುತ್ತದೆ. ಇಂತಹ ಕ್ರಮಗಳನ್ನು ಕೈಗೊಳ್ಳುವುದರ ಬಗ್ಗೆ ಎಲ್ಲರ ಸಮ್ಮತಿಯೂ ಇರುತ್ತದೆ. ಈ ಸಹಮತವೇ ಜನರನ್ನು ಒಗ್ಗೂಡಿಸುವ ಶಕ್ತಿಯೆಂದು ಸೆಕ್ಯುಲರಿಸಂ ನಂಬುತ್ತದೆ. ಇಂತಹ ಸಮಾಜದಲ್ಲಿ, ತರ್ಕದ ಹಿನ್ನೆಲೆಯಲ್ಲಿ ತಮ್ಮ ಜೀವನವನ್ನು ನಿಯಂತ್ರಿಸುವ ಮತ್ತು ಅನ್ಯರ ಸೇವೆ ಮಾಡುವುದರಿಂದ ಅದನ್ನು ಪವಿತ್ರವಾಗಿಸುವ ಜನರು ಇರುತ್ತಾರೆ. ('ಪ್ರಿನ್ಸಿಪಲ್ಸ್ ಆಫ್ ಸೋಶಿಯಲಿಸಂ', ಪುಟ 17) ಭಾರತೀಯ ಸಂದರ್ಭದಲ್ಲಿ ಜಾತ್ಯತೀತತೆಯನ್ನು ಹೀಗೆ ವಿವರಿಸಬಹುದು:


1. ಗಾಂಧೀಜಿಯವರು 'ಸರ್ವಧರ್ಮಸಹಭಾವ' ಎಂದು ಕರೆದ ಸಂಗತಿ. ಇದನ್ನು ನಂಬುವ ನಾಗರಿಕ ಸಮಾಜದಲ್ಲಿ ಅನ್ಯಧರ್ಮಗಳನ್ನು ಅರ್ಥ ಮಾಡಿಕೊಳ್ಳುವ ಮತ್ತು ಪರಸ್ಪರ ಗೌರವ ತೋರಿಸುವ ಧೋರಣೆಯು ಯಾವಾಗಲೂ ಜಾಗೃತವಾಗಿರುತ್ತದೆ.

2. ದೇವರನ್ನು ನಂಬುವವರು ಮತ್ತು ನಂಬದವರು ಒಬ್ಬರನ್ನೊಬ್ಬರು ಅರ್ಥಮಾಡಿಕೊಂಡು ಗೌರವದಿಂದ ಕಾಣುತ್ತಾರೆ.

3. ಪ್ರಭುತ್ವಕ್ಕೂ, ಧರ್ಮಕ್ಕೂ ಪರಸ್ಪರ ಸಂಬಂಧವಿರುವುದಿಲ್ಲ. ಆದ್ದರಿಂದಲೇ ಕಾನೂನಿನ ಎದುರಿಗೆ ಎಲ್ಲರೂ ಸಮಾನರಾಗಿರುತ್ತಾರೆ.

### ◆ ಅನುಭಾವ ಮತ್ತು ಭಕ್ತಿಯು ಧರ್ಮಕ್ಕಿಂತ ಭಿನ್ನವೆ?

ಧರ್ಮವು ಒಂದು ಸಂಸ್ಥೆ, ಒಂದು 'ಸಂಸ್ಥೆ'ಗೆ ಸಹಜವಾಗಿ ಇರುವ ಎಲ್ಲ ಶಕ್ತಿ, ದೌರ್ಬಲ್ಯಗಳೂ ಇದಕ್ಕಿದೆ. ಇದು ವಿಧಿಕ್ರಿಯೆಗಳು ಮತ್ತು ಸಾಂಪ್ರದಾಯಿಕ ಆಚರಣೆಗಳ ತಳಹದಿಯ ಮೇಲೆ ರೂಪಿತವಾಗಿದೆ. ಧರ್ಮದ ಆಚರಣೆಯು ದೇವಸ್ಥಾನ, ಮಸೀದಿ, ಚರ್ಚು, ಗುರುದ್ವಾರ ಮುಂತಾದ ಪೂಜಾಸ್ಥಾನಗಳನ್ನೂ ಪವಿತ್ರವಾದ ಯಾತ್ರಾಸ್ಥಳಗಳನ್ನೂ ಒಳಗೊಂಡಿದೆ. ಅವುಗಳ ಜೊತೆಗೆ ಮನುಷ್ಯರು ಮತ್ತು ದೇವರ ನಡುವಿನ ಮಧ್ಯವರ್ತಿಗಳಂತೆ ಕೆಲಸ ಮಾಡುವ ಪೂಜಾರಿ, ಪುರೋಹಿತರೂ ಇರುತ್ತಾರೆ. ಇದು ಇತರ ಧರ್ಮಗಳ ಬಗ್ಗೆ ದ್ವೇಷ, ತಿರಸ್ಕಾರಗಳನ್ನು ಉಂಟು ಮಾಡಿದಾಗ, ಸಂಕುಚಿತವೂ ಅಸಹಿಷ್ಣುವೂ ಸ್ವ-ಕೇಂದ್ರಿತವೂ ಆಗುತ್ತದೆ. ಆದರೆ, ನನ್ನ ಪ್ರಕಾರ, ಭಕ್ತಿಗೆ ಇದೆಲ್ಲದರ ಅವಶ್ಯಕತೆ ಒಂದಿನಿತೂ ಇಲ್ಲ. ಅದು ಈ ವಿಶ್ವದ ಅನಂತವಾದ ನಿಗೂಢತೆಯ ಸನ್ನಿಧಿಯಲ್ಲಿ ನಾವು ಅನುಭವಿಸುವ ಬೆರಗು ಮತ್ತು ವಿನಯಗಳ ಅಭಿವ್ಯಕ್ತಿ. ಅವು ಅನುಭಾವದ ಮೂಲಸೆಲೆಯೂ ಹೌದು. ಧರ್ಮವು ನಮ್ಮನ್ನು ಹಲವು ಬಗೆಯ ಬಂಧನಗಳಿಗೆ ಒಳಪಡಿಸಿದರೆ,




ಆಧ್ಯಾತ್ಮಿಕತೆಯು ಬಿಡುಗಡೆಗೊಳಿಸುತ್ತದೆ. ಕಬೀರ, ಬಸವಣ್ಣ, ಅಕ್ಕ, ತುಕಾರಾಮ್, ಬುಲ್ಲೇ ಶಾ, ಶಾ ಅಬ್ದುಲ್ ಲತೀಫ್, ಮೀರಾ, ಲಾಲ್ ದೇಡ್ ಮುಂತಾದವರಿಗೆ ಮೂಢನಂಬಿಕೆಗಳಿರಲಿಲ್ಲ. ಅವರು ಧಾರ್ಮಿಕವಾದ ಆಚರಣೆಗಳನ್ನು ನಿರಾಕರಿಸಿದರು. ಅವರಿಗೆ ಪುರೋಹಿತಶಾಹಿಯ ಬಗ್ಗೆ ಗೌರವವಿರಲಿಲ್ಲ. ಪ್ರತಿಯೊಬ್ಬ ಮನುಷ್ಯನೂ ಈ ವಿಶ್ವದ ನಿಗೂಢತೆಯೊಂದಿಗೆ ನೇರವಾಗಿ ಸಂಬಂಧ ಬೆಳೆಸಬಹುದೆಂದು ಅವರು ನಂಬಿದ್ದರು. ಅವರು